ಕರ್ನಾಟಕ ವಿಧಾನಸಭೆ

ಬುಧವಾರ 20ನೇ ಜುಲೈ 2005ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ ಪ್ರಥಮದರ್ಜೆ ಕಾಲೇಜಿನ ಅರೆಕಾಲಿಕ ಉಪನ್ಯಾಸಕರನ್ನು ಮರುನೇಮಕ ಮಾಡಿಕೊಳ್ಳುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ವಿರೋಧ ಪಕ್ಷದಲ್ಲಿರುವ ನಾವೆಲ್ಲರೂ ಸೇರಿ ಪ್ರಸ್ತಾಪಿಸಬೇಕೆಂದಿದ್ದೇವೆ. ಆ ಮನೆಯಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಪ್ರಥಮದರ್ಜೆ ಕಾಲೇಜಿನ 447 ಅರೆಕಾಲಿಕ ಉಪನ್ಯಾಸಕರನ್ನು ಎನ್.ಇ.ಟಿ. ಪಾಸು ಮಾಡಿಲ್ಲವೆಂದು ಅವರನ್ನು ಮೊನ್ನೆಯಿಂದ ತಕ್ಷಣ ನಿವೃತ್ತಿಗೊಳಿಸಿದ್ದಾರೆ. ನಾವೆಲ್ಲರೂ ಕೂಡ ಇದಕ್ಕೆ ಸಹಿಯನ್ನು ಮಾಡಿ ಕಳುಹಿಸಿದ್ದೇವೆ ಸುಪ್ರೀಂ ಕೋರ್ಟ್‌ನವರು ಎನ್.ಇ.ಟಿ ಪರೀಕ್ಷೆ ಪಾಸಾಗದಿದ್ದವರನ್ನು ನಿವೃತ್ತಿಗೊಳಿಸಬೇಕೆಂದು ಹೇಳಿದ್ದರೂ ಸಹ ಮತ್ತೊಮ್ಮೆ ಅವರು ಮೇಲ್ಮನವಿಯನ್ನು ಸಲ್ಲಿಸಿದ ಸಂದರ್ಭದಲ್ಲಿ ನೀವು ಇದರ ಬಗ್ಗೆ ಅಪ್ರೋಪ್ರೆಯೇಟ್ ಬಾಡಿ ಹತ್ತಿರ ಹೋಗಿ ಇದರ ರಕ್ಷಣೆಯನ್ನು ತೆಗೆದುಕೊಳ್ಳಿ ಎನ್ನುವ ಮಾತನ್ನು ಹೇಳಿದ್ದಾರೆ. ಈಗಾಗಲೇ ಅದಕ್ಕೋಸ್ಕರವಾಗಿ ಅವರು ಕೆಎಟಿ ಮುಂದೆ ಹೋಗಿದ್ದಾರೆ. ಅದಕ್ಕೆ ಸ್ಟೇ ಕೂಡ ಸಿಕ್ಕಿದೆ. ಅವರು ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳದ ಹಾಗೆ ನಿವೃತ್ತಿಗೊಳಿಸಿದ್ದೀರಿ, ಆದರೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದಾಗ ಆ ರೀತಿಯಾಗಿ ಏನೂ ಹೇಳಿಲ್ಲ. ಇಲ್ಲಿ 500 ಶಿಕ್ಷಕರ ಭವಿಷ್ಯದ ಪ್ರಶ್ನೆ ಇದೆ. ಅವರು ಎಂಎಸ್‌ಸಿ ಮಾಡಿದಂಥ ಕಾಲದಲ್ಲಿ 15 ವರ್ಷಗಳ ಹಿಂದೆ ಎನ್‌ಇಟಿ ಪರೀಕ್ಷೆ ಇರಲೇ ಇಲ್ಲ. ಇದು ಅಪ್ರಸ್ತುತ ಅದಕ್ಕೋಸ್ಕರ ನಾವೇನು ಇವತ್ತು ಹೇಳಿದ್ದೇವೆ ಅಂದರೆ ಪಿಯುಸಿಯಲ್ಲಿ ಅವರನ್ನು ಅಬ್ಸಾರ್ಬ್ ಮಾಡಿಕೊಂಡು ಅವರು ಮುಂದುವರೆಯುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಯಾರನ್ನು ನಿವೃತ್ತಿ ಮಾಡಿದ್ದೀರೋ ಅವರೆಲ್ಲರನ್ನೂ ಮರುನೇಮಕ ಮಾಡಿಕೊಂಡು 447 ಅರೆಕಾಲಿಕ ಉಪನ್ಯಾಸಕರಿಗೆ ತೊಂದರೆಯಾಗದ ರೀತಿಯಲ್ಲಿ ಅವರನ್ನು ಮುಂದುವರೆಸಬೇಕೆಂದು ಈ ಮನೆಯಲ್ಲಿ ಮಾನ್ಯ ಮಾಧುಸ್ವಾಮಿ, ವಾಟಾಳ್

ನಾಗರಾಜ್ ಮತ್ತು ನಾವುಗಳು ಎಲ್ಲರೂ ಪ್ರಸ್ತಾಪ ಮಾಡಿದಾಗ ಮಂತ್ರಿಗಳು ಆಯಿತು ಎಂದು ಒಪ್ಪಿಕೊಂಡಿದ್ದೀರಿ. ಆದರೆ ಈಗ ನೋಡಿದರೆ ಈಗಾಗಲೇ ಅವರನ್ನೆಲ್ಲಾ ನಿವೃತ್ತಿಗೊಳಿಸಿಬಿಟ್ಟಿದ್ದಾರೆ. ಅದಕ್ಕೋಸ್ಕರ ತತ್‌ಕ್ಷಣ ಅವರನ್ನು ಮರುನೇಮಕ ಮಾಡಿಕೊಂಡು ಪಿಯುಸಿ ಕಾಲೇಜಿನಲ್ಲಾದರೂ ಅವರನ್ನು ಮುಂದುವರೆಸಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರೇನು ವಿಷಯವನ್ನು ಎತ್ತಿದ್ದಾರೆ. ಅದನ್ನು ನಾವು ಶಿಕ್ಷಣ ಸಚಿವರ ಗಮನಕ್ಕೆ ತರುತ್ತೇವೆ. ಮೋಸ್ಟಲಿ ಅವರು ಮೇಲ್ಮನೆಯಲ್ಲಿರಬಹುದು. ಅವರು ಇದ್ದಾಗ ಮಾತನಾಡಿದರೆ ಅವರು ಉತ್ತರವನ್ನಾದರೂ ಕೊಡಬಹುದು. ನಿಮಗೆ ಲಾಭವಾದರೂ ಆಗುತ್ತದೆ. ಶಿಕ್ಷಣ ಸಚಿವರು ಬಂದ ನಂತರ ತೆಗೆದುಕೊಳ್ಳಿ.

ಅಧ್ಯಕ್ಷರು: ಶಿಕ್ಷಣ ಸಚಿವರು ಬರಲಿ.

ಅಧ್ಯಕ್ಷರು: ಈಗ ಬೇಡಿಕೆಗಳ ಮೇಲೆ ಚರ್ಚೆ ವಿಷಯವನ್ನು ತೆಗೆದುಕೊಳ್ಳೋಣ. ಮಾನ್ಯ ವಾಟಾಳ್‌ನಾಗರಾಜ್‌ರವರು ದಯಮಾಡಿ ತಾವು ಹಿರಿಯ ಸದಸ್ಯರು ದಯಮಾಡಿ ಹತ್ತೇ ನಿಮಿಷದಲ್ಲಿ ಮುಗಿಸಬೇಕು. ಏಕೆಂದರೆ ಇನ್ನೂ 18 ಇಲಾಖೆಗಳಿದ್ದಾವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಎರಡೆರಡು ಮಾತುಗಳನ್ನು ಹೇಳುತ್ತೇವೆ ಅಷ್ಟೆ.

ಅಧ್ಯಕ್ಷರು: ದಯಮಾಡಿ ಹಿರಿಯ ಸದಸ್ಯರುಗಳು ಸಲಹೆಗಳ ರೂಪದಲ್ಲಿ ಹೇಳಿಬಿಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ನಾನು ಸಹಕಾರ ಇಲಾಖೆಗೆ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಅಧ್ಯಕ್ಷರೆ ತಮಗೆ ಒಂದು ಇನ್‌ಫರ್ಮೇಷನ್ ಕೊಡುತ್ತೇವೆ. ಎಜುಕೇಷನ್ ಡಿಪಾರ್ಟ್‌ಮೆಂಟ್‌ನಿಂದ ಒಂದು ಇನ್‌ಫರ್ಮೇಷನ್ ಬಂದಿದೆ. Supreme Court did not direct the part-time Lectuiers to approach the KAT. However, the subject is being placed before the Cabinet to-day for decision. ಇದೇ ವಿಷಯದಲ್ಲಿ ತಾವು ವಿಷಯವನ್ನು ಪ್ರಸ್ತಾಪಮಾಡಿದಿರಿ. ಸಂಜೆ ಇದು ಕ್ಯಾಬಿನೆಟ್‌ಗೆ ಬರುತ್ತಾ ಇದೆ. ಸುಪ್ರೀಂ ಕೋರ್ಟಿನಿಂದ ಅವರಿಗೆ ಕೆಎಟಿ ಯನ್ನು ಅಪ್ರೋಚ್ ಮಾಡಬೇಕೆನ್ನುವ ಡೈರೆಕ್ಷನ್ಸ್ ಇಲ್ಲ. It is for the information of the House. ಎರಡನೆಯದು, ಈ ವಿಷಯ ಇವತ್ತು ಸಚಿವಸಂಪುಟದ ಮುಂದೆ ನಿರ್ಣಯಕ್ಕಾಗಿ ಬರುತ್ತಾ ಇದೆ. ಇದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನವೀಯ ದೃಷ್ಟಿಯಿಂದ ಅವರುಗಳನ್ನು ಸೇವೆಯಲ್ಲಿ ಉಳಿಸಿಕೊಳ್ಳುವ ಹಾಗೆ ಮಾಡಬೇಕು.

ಶ್ರೀ ಆರ್.ವಿ.ದೇಶಪಾಂಡೆ: ಆ ಸಲಹೆಯನ್ನು ತಾವು ಕೊಟ್ಟಿದ್ದೀರಿ. ಅದನ್ನು ಡೆಫನೇಟ್‌ಲಿ ಸರ್ಕಾರ ಗಮನದಲ್ಲಿ ಇಟ್ಟುಕೊಳ್ಳುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಲ್ಲಿ ಭರವಸೆಯನ್ನೂ ಕೊಟ್ಟಿದ್ದರು.

ಶ್ರೀ ಎಸ್.ಎಸ್.ಪಾಟೀಲ್: ಅದರ ಮೇಲೆಯೇ ಮಾನ್ಯ ನಾಡಗೌಡರದ್ದು ಸ್ಟಾರ್ಡ್ ಕ್ವೆಶ್ಚನ್ ರೂಪದಲ್ಲಿ ಬಂದಿದೆ.

2. ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ (ಬೇಡಿಕೆಗಳ ಸಂಖ್ಯೆ 9,18,6,16 ಮತ್ತು 10)

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ಸಹಕಾರ ಇಲಾಖೆಯ ಮೇಲೆ ಚರ್ಚೆ ನಡೆಯುವ ಕಾಲದಲ್ಲಿ ನಾನು ಭಾಗವಹಿಸಬಾರದು ಎಂದು ಇದ್ದೆ. ಏಕೆಂದರೆ ಶಿಕ್ಷಣ ಇಲಾಖೆಯ ಮೇಲೆ ನಾನು ಬಹಳ ಸಮಯವನ್ನು ತೆಗೆದುಕೊಂಡಿದ್ದೆ. ಎರಡು – ಮೂರು ಸಲಹೆಗಳನ್ನು ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ. ಈಗ ಸೊಸೈಟಿ ಚುನಾವಣೆಗಳನ್ನೆಲ್ಲಾ ಸನ್ಮಾನ್ಯ ದೇಶಪಾಂಡೆಯವರು ಮಂತ್ರಿಗಳಾದ ಮೇಲೆ ಮಾಡಿದರು. ನಾವು ಕೇಳಿ ಕೊಂಡಿದ್ದೆವು. ನೀವು ಒಂದು ಸಲ ಈ ಸ್ಕೀಮ್ ಈ ಇಂಟರೆಸ್ಟ್ ವೇವ್ ಮಾಡುವ ಸ್ಕೀಮ್ ಅಥವಾ ಪೀನಲ್ ಇಂಟರೆಸ್ಟ್ ಸೇವೆ ಮಾಡುವ ಸ್ಕೀಮ್ ಆದಮೇಲೆ ಮಾಡಿದ್ದರೆ ಪಾರ್ಟಿಸಿಪೇಷನ್ ಜಾಸ್ತಿ ಇರುತ್ತೇ ಎಂದು Sir, Main the Principle in Co-Operation is Paticipation ಎಂದು ಅವರು ಟ್ರೈನಿಂಗ್‌ನಲ್ಲಿ ಹೇಳಿಕೊಡುವುದು. ಇಡೀ ಸೊಸೈಟಿಗಳು ಶೇಕಡ 5 ರಿಂದ 10 ಪರ್‌ಸೆಂಟ್ ಸದಸ್ಯರನ್ನು ಒಳಗೊಂಡು ಚುನಾವಣೆಗಳನ್ನು ಮಾಡಿದೆ. ಲೋನಿಗಳು ಮಾತ್ರ ವೋಟನ್ನು ಹಾಕಬೇಕೆಂದು ಹೇಳಿ. ಅದನ್ನು ಮಾಡಬೇಕಾದರೆ ಒಂದೇ ಒಂದು ನ್ಯೂನತೆಯನ್ನು ಅವರಿಗೆ ಗುರುತು ಮಾಡಿ ಹೇಳುತ್ತೇನೆ. ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ನೀವೇನು ಶೇರನ್ನು ಇಲ್ಲಿಂದ ಸರ್ಕಾರದಿಂದ ತುಂಬಿದ್ದಿರಿ, ಅವರ ಶೇರನ್ನು ಎನ್‌ಹ್ಯಾನ್ಸ್ ಮಾಡಬೇಕಾದರೆ ಅವರು ಗೌರ್ನಮೆಂಟ್‌ಗ್ ಬರೆಯಲಿಲ್ಲ. ಗೌರ್ನಮೆಂಟ್ ಆಸಕ್ತಿ ತೆಗೆದುಕೊಂಡು ಆ ಶೇರನ್ನು ಎನ್‌ಹ್ಯಾನ್ಸ್ ಮಾಡಿಕೊಡಲಿಲ್ಲ. ನೂರು ರೂ.ಹತ್ತು ರೂ.ಇದ್ದುದು 250 ರೂ, 500 ರೂ. ಎಂದು ಮಾಡಿಕೊಂಡುಬಿಟ್ಟರು. ಒಬ್ಬನೇ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಲಿಕ್ಕೆ ಈ ಸಲ ಅವಕಾಶವನ್ನು ಕೊಡಲಿಲ್ಲ. ಇದೊಂದು ದೊಡ್ಡ ಪಿತೂರಿ.